ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ          ದಿನಾಂಕ : DATE 18/6/2020

# ಕೈಗೆ ಹರಿಪ್ರಸಾದ್ ಅಚ್ಚರಿ!

## ಎಂಟಿಬಿ, ಶಂಕರ್ ಸೇರಿ ನಾಲ್ವರಿಗೆ ಬಿಜೆಪಿ ಟಿಕೆಟ್

ಉ.ವಾ: 18-06-2020

**ಬೆಂಗಳೂರು:** ರಾಜ್ಯ ವಿಧಾನಪರಿಷತ್ ಚುನಾವಣೆಗೆ ಮೂರು ಪಕ್ಷಗಳೂ ಅಭ್ಯರ್ಥಿಗಳನ್ನು ಅಖೈರುಗೊಳಿಸಿವೆ. ಕಾಂಗ್ರೆಸ್ ಅಚ್ಚರಿ ಎಂಬಂತೆ ಈಗಷ್ಟೇ ರಾಜ್ಯಸಭೆ ಅವಧಿ ಮುಗಿಸುತ್ತಿರುವ ಬಿ.ಕೆ.ಹರಿಪ್ರಸಾದ್ ಹಾಗೂ ಹಾಲಿ ಸದಸ್ಯ ನಸೀರ್ ಅಹಮದ್ ಅವರಿಗೆ ಟಿಕೆಟ್ ನೀಡಿದೆ. ಬಿಜೆಪಿ ತಡರಾತ್ರಿ ಅಭ್ಯರ್ಥಿಗಳ ಹೆಸರುಗಳನ್ನು ಘೋಷಣೆ ಮಾಡಿದ್ದು, ಎಂಟಿಬಿ ನಾಗರಾಜ್, ಆರ್. ಶಂಕರ್, ಸುನೀಲ್ ವಲ್ಯಾಪುರೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಾಪ್ ಸಿಂಹ ನಾಯಕ್ ಅವರಿಗೆ ಟಿಕೆಟ್ ನೀಡಿದೆ. ರಾಜ್ಯ ಕೋರ್ ಕಮಿಟಿ ಶಿಫಾರಸು ಮಾಡಿದ್ದ 3 ಹೆಸರುಗಳನ್ನು ಕೇಂದ್ರ ಸಮಿತಿ ಮಾನ್ಯ ಮಾಡಿದೆ.

ಉಪಚುನಾವಣೆಯಲ್ಲಿ ಸ್ಪರ್ಧಿಸದ ಶಂಕರ್‌ಗೆ ಮೊದಲೇ ಟಿಕೆಟ್ ನೀಡುವ ಬಗ್ಗೆ ಭರವಸೆ ನೀಡಲಾಗಿತ್ತು. ಹಾಗೆಯೇ ಎಂಟಿಬಿ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದರಾದರೂ, ಸೋತಿದ್ದರು. ಇನ್ನು ಸುನೀಲ್ ವಲ್ಯಾಪುರೆ ಅವರು ಮೂಲ ಬಿಜೆಪಿಗರಾಗಿದ್ದಾರೆ. ಇಲ್ಲಿ ಪ್ರತಾಪ ಸಿಂಹ ನಾಯಕ್ ಅವರು ಬಿಜೆಪಿಯ ಸಾಮಾನ್ಯ ಕಾರ್ಯಕರ್ತರಾಗಿದ್ದು, ಇವರಿಗೆ ಟಿಕೆಟ್ ನೀಡಿ ರಾಜ್ಯಸಭೆಯಂತೆಯೇ ಇಲ್ಲೂ ಅಚ್ಚರಿ ನೀಡಲಾಗಿದೆ.

**ಕಾಂಗ್ರೆಸ್:** ಕಾಂಗ್ರೆಸ್‌ನಿಂದ ನಸೀರ್ ಅಹಮದ್ ಹಾಗೂ ಎಂ.ಆರ್.ಸೀತಾರಾಂ ಹೆಸರು ಅಂತಿಮ ಎಂದು ಹೇಳಲಾಗಿತ್ತು. ನಂತರ ಹೈಕಮಾಂಡ್ ಸೂಚನೆ ಮೇರೆಗೆ ಮತ್ತಷ್ಟು ಹೆಸರುಗಳನ್ನು ಕಳುಹಿಸಲಾಗಿತ್ತು. ಅಂತಿಮವಾಗಿ ರೇಸ್‌ನಲ್ಲಿ ಇರದ ಬಿ.ಕೆ.ಹರಿಪ್ರಸಾದ್‌ಗೆ ಟಿಕೆಟ್ ನೀಡಿ ರಾಜ್ಯ ಕಾಂಗ್ರೆಸ್ ನಾಯಕರನ್ನು ಹೈಕಮಾಂಡ್ ಶಾಕ್ ನೀಡಿದೆ.

ನಸೀರ್ ಅಹಮದ್ ಅವರಿಗೂ ಮತ್ತೊಮ್ಮೆ ಅವಕಾಶ ನೀಡಲು ವಿರೋಧ ವ್ಯಕ್ತವಾಗಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಕೊಡುವುದಾದರೇ ಆದರೆ ಹೊಸಬರಿಗೆ ಕೊಡಬೇಕು. ಕ್ರೈಸ್ತ ಸಮುದಾಯಕ್ಕೂ ಅವಕಾಶ ನೀಡಬೇಕು ಎಂಬ ವಾದ ಇತ್ತು. ಜತೆಗೆ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಅವರು ವಿರೋಧ ಮಾಡಿದ್ದರು. ಆದರೂ ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಹಾಗೂ ಗುಲಾಂ ನಬಿ ಆಜಾದ್ ಬೆಂಬಲದಿಂದ ನಸೀರ್ ಅಹಮದ್ ಟಿಕೆಟ್ ಪಡೆದಿದ್ದಾರೆ.

ಬಿ.ಕೆ.ಹರಿಪ್ರಸಾದ್ ಹೆಸರು ರಾಜ್ಯ ಕಾಂಗ್ರೆಸ್‌ನಿಂದ ಶಿಫಾರಸು ಆಗಿರಲಿಲ್ಲ. ಎಂ.ಆರ್.ಸೀತಾರಾಂ ಅವರಿಗೆ ಟಿಕೆಟ್ ನೀಡುವುದಕ್ಕೆ ಬಿ.ಕೆ.ಹರಿಪ್ರಸಾದ್ ವಿರೋಧವಿತ್ತು. ಆದರೆ, ಅವರಿಗೇ ಟಿಕೆಟ್ ದೊರೆಯುತ್ತದೆ ಎಂಬ ನಿರೀಕ್ಷೆ ಇರಲಿಲ್ಲ.

➘ 5ನೇ ಪುಟಕ್ಕೆ



ಬಿ.ಕೆ.ಹರಿಪ್ರಸಾದ್ ನಸೀರ್ ಅಹಮದ್ ಗೋವಿಂದರಾಜು

### ಇಂದು ಹೆಸರು ಪ್ರಕಟ?

ಜೆಡಿಎಸ್‌ನಲ್ಲಿ ಕುಪೇಂದ್ರರೆಡ್ಡಿ ಹಾಗೂ ಟಿ.ಎ. ಶರವಣ ನಡುವೆ ಟಿಕೆಟ್‌ಗೆ ಪೈಪೋಟಿ ಇತ್ತಾದರೂ ಕೋಲಾರದಲ್ಲಿ ಪಕ್ಷ ಸಂಘಟನೆ ಹಾಗೂ ಕಳೆದ ಚುನಾವಣೆಯಲ್ಲಿ ಕೆ.ಶ್ರೀನಿವಾಸಗೌಡರ ಗೆಲುವಿಗೆ ಶ್ರಮಿಸಿದ್ದ ಗೋವಿಂದರಾಜು ಅವರಿಗೆ ಟಿಕೆಟ್ ನೀಡಲು ಕೊನೇ ಕ್ಷಣದಲ್ಲಿ ತೀರ್ಮಾನ ಮಾಡಲಾಗಿದೆ. ಆದರೆ, ಅಧಿಕೃತವಾಗಿ ಇನ್ನೂ ಪ್ರಕಟಿಸಿಲ್ಲ. ಗುರುವಾರ ಬೆಳಗ್ಗೆ ಪ್ರಕಟಿಸಲಾಗುವುದು ಎಂದು ಹೇಳಲಾಗಿದೆ.

## ಕೈಗೆ ಹರಿಪ್ರಸಾದ್ ಅಚ್ಚರಿ!

1ನೇ ಪುಟದಿಂದ ▶ ಎಐಸಿಸಿಯಲ್ಲಿ ಪ್ರಧಾನ ಕಾರ್ಯದರ್ಶಿ, ಹಲವು ರಾಜ್ಯಗಳ ಉಸ್ತುವಾರಿಯಾಗಿ ರಾಜ್ಯಸಭೆ ಸದಸ್ಯರಾಗಿ ಕೇಂದ್ರ ರಾಜಕಾರಣದಲ್ಲಿದ್ದ ಹರಿಪ್ರಸಾದ್ ಅವರನ್ನು ದಿಢೀರ್ ರಾಜ್ಯ ರಾಜಕಾರಣಕ್ಕೆ ಕಳುಹಿಸುತ್ತಿದ್ದು ಕುತೂಹಲ ಮೂಡಿಸಿದೆ.

ಹಿಂದುಳಿದ ವರ್ಗದ ಕೋಟಾದಡಿ ಸಿದ್ದರಾಮಯ್ಯ ಅವರು ಚಿಮ್ಮನಕಟ್ಟಿ ಅವರಿಗೆ ಟಿಕೆಟ್ ಕೊಡಿಸಲು ಪ್ರಯತ್ನಿಸಿದ್ದರು. ಡಿ.ಕೆ.ಶಿವಕುಮಾರ್ ಅವರು ಎಚ್.ಎಂ.ರೇವಣ್ಣ ಅವರಿಗೆ ಟಿಕೆಟ್ ಕೊಡಿಸಲು ಯತ್ನಿಸಿದ್ದರು. ಮಲ್ಲಿಕಾರ್ಜುನ ಖರ್ಗೆ ಅವರು ಎಂ.ಆರ್.ಸೀತಾರಾಂ ಪರ ನಿಂತಿದ್ದರು. ಎಂ.ಸಿ.ವೇಣುಗೋಪಾಲ್ ಮತ್ತೊಂದು ಅವಧಿಗೆ ಅವಕಾಶಕ್ಕಾಗಿ ಮನವಿ ಮಾಡಿದ್ದರು. ಆದರೆ, ಹೈಕಮಾಂಡ್ ಬಿ.ಕೆ.ಹರಿಪ್ರಸಾದ್ ಹೆಸರು ಘೋಷಿಸಿತು.